# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು)**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 570**

**ಉತ್ತರಿಸಬೇಕಾದ ದಿನಾಂಕ : 20.02.2024**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 9 ತಿಂಗಳಿನಲ್ಲಿ ಸಹಕಾರ ಇಲಾಖೆಯ ಮೂಲಕ ಬೆಳೆ ಸಾಲಕ್ಕಾಗಿ ನೀಡಿರುವ ಬಡ್ಡಿಯ ಸಹಾಯ ಧನವೆಷ್ಟು; ಫಲಾನುಭವಿಗಳ ಸಂಖ್ಯೆ ಎಷ್ಟು; ಕೃಷಿ ಸಾಲವು ಸುಲಭ ದರದಲ್ಲಿ ದೊರೆಯುವಂತಾಗಲು ಸರ್ಕಾರ ಕೈಗೊಂಡ ಕ್ರಮಗಳೇನು; (ವಿವರ ನೀಡುವುದು) | ಬೆಳೆ ಸಾಲದ ಮೇಲಿನ ಬಡ್ಡಿ ಸಹಾಯಧನದ ಯೋಜನೆಯಲ್ಲಿ ಕಳೆದ 9 ತಿಂಗಳಿನಲ್ಲಿ ಕೃಷಿ ಸಾಲ ಮರುಪಾವತಿಸಿದ 24,94,111 ರೈತರ ಪರವಾಗಿ ರೂ.942.62 ಕೋಟಿಗಳ ಬಡ್ಡಿ ಸಹಾಯಧನವನ್ನು ಸಹಕಾರ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ವಿವರ ಈ ಕೆಳಗಿನಂತಿದೆ. |

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಜಿಲ್ಲೆಯ ಹೆಸರು | ರೈತರ ಸಂಖ್ಯೆ | ಬಡ್ಡಿ ಸಹಾಯಧನದ ಮೊತ್ತ |
|---|---|---|---|
| 1 | bagalkot | 159309 | 6145.07 |
| 2 | bangalore( kscard bank and Dcc bank) | 198607 | 8722.88 |
| 3 | bangalore rural | 22656 | 738.31 |
| 4 | belgaum | 264453 | 8306.74 |
| 5 | bellary | 78695 | 3896.53 |
| 6 | bidar | 134399 | 3794.58 |
| 7 | bijapur | 165077 | 5772.96 |
| 8 | Chamarajnagar | 19464 | 986.28 |
| 9 | chikkaballapura | 13219 | 768.07 |
| 10 | Chikkamagalore | 35544 | 2821.09 |
| 11 | chitradurga | 47487 | 2266.60 |
| 12 | davanagere | 72783 | 2815.27 |
| 13 | dharwad | 28072 | 788.93 |
| 14 | gadag | 27316 | 696.90 |
| 15 | gulbarga | 57799 | 1442.07 |
| 16 | Hassan | 158464 | 4611.30 |
| 17 | haveri | 35491 | 793.51 |
| 18 | kodagu | 27538 | 2381.07 |
| 19 | kolar | 17773 | 765.99 |
| 20 | Koppal | 31610 | 1008.59 |
| 21 | mandya | 128909 | 4022.18 |
| 22 | Mysore | 53086 | 2988.29 |
| 23 | north canara | 84005 | 4393.74 |
| 24 | raichur | 55524 | 2124.82 |
| 25 | ramanagara | 53532 | 1788.62 |
| 26 | shimoga | 53903 | 2938.91 |
| 27 | South Canara | 114281 | 10583.56 |
| 28 | tumkur | 286683 | 2784.77 |
| 29 | Udupi | 44468 | 2580.49 |
| 30 | yadagiri | 23964 | 534.29 |
| | Grand Total | 2494111 | 94262.40 |

| | | |
|---|---|---|
| | | ಕೃಷಿ ಸಾಲವು ರೈತರಿಗೆ ಸುಲಭ ದರದಲ್ಲಿ ದೊರೆಯುವಂತಾಗಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.<br><br>1. 2023-24 ನೇ ಸಾಲಿಗೆ ಸಹಕಾರ ಸಂಸ್ಥೆಗಳ ಮೂಲಕ 34.40 ಲಕ್ಷ ರೈತರಿಗೆ ರೂ.23,000 ಕೋಟಿಗಳ ಬೆಳೆ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ವಿತರಿಸಲು ಹಾಗೂ 0.64 ಲಕ್ಷ ರೈತರಿಗೆ ರೂ.1700 ಕೋಟಿಗಳ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲವನ್ನು ಶೇ.3 ರ ಬಡ್ಡಿ ದರದಲ್ಲಿ ವಿತರಿಸಲು ಗುರಿ ನಿಗದಿಪಡಿಸಲಾಗಿದೆ.<br><br>2. ನಿಗದಿತ ಅವಧಿಯೊಳಗೆ ಅಸಲು/ಕಂತುಗಳನ್ನು ಮರುಪಾವತಿಸಿದ ರೈತರಿಗೆ ರೂ.5.00 ಲಕ್ಷ ಗಳವರೆಗಿನ ಶೂನ್ಯ ಬಡ್ಡಿ ದರದಲ್ಲಿ ಬೆಳೆ ಸಾಲ ವಿತರಿಸಲು ಹಾಗೂ ರೂ.15.00 ಲಕ್ಷಗಳ ವರೆಗಿನ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳಿಗೆ ಶೇ.3 ರ ಬಡ್ಡಿಯನ್ನು ಮಾತ್ರ ವಸೂಲು ಮಾಡಿ, ಸರ್ಕಾರ ನಿಗದಿಪಡಿಸಿದ ಬಡ್ಡಿ ಸಹಾಯಧನವನ್ನು ಸರ್ಕಾರದಿಂದ ಕ್ಲೇಮು ಮಾಡಲು ಸಹಕಾರ ಸಂಸ್ಥೆಗಳಿಗೆ ಸೂಚಿಸಲಾಗಿದೆ. |
| ಆ) | ಕಳೆದ ಒಂದು ವರ್ಷಗಳಲ್ಲಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮವು ಯಾವ ಯಾವ ಕೃಷಿ ಉತ್ಪನ್ನಗಳನ್ನು ಎಷ್ಟು ಪ್ರಮಾಣದಲ್ಲಿ ಶೇಖರಿಸಿಟ್ಟು ಕೊಂಡಿತ್ತು: ಕೃಷಿ ಉತ್ಪನ್ನವಾರು ಮಾಹಿತಿ ನೀಡುವುದು; | ವಿವರವನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಇ) | ರಾಜ್ಯದ ಯಾವ ಬೆಳೆಯನ್ನು ಬೆಳೆಯಲು ರೈತರು ಈ ಉಗ್ರಾಣಗಳನ್ನು ಬಳಸಿಕೊಳ್ಳುತ್ತಿದ್ದಾರೆ; ಫಲಾನುಭವಿಗಳ ಸಂಖ್ಯೆಯೊಂದಿಗೆ ಮಾಹಿತಿ ನೀಡುವುದು; | ರಾಜ್ಯಾದ್ಯಂತ ಆಯಾ ಪ್ರದೇಶಕ್ಕೆ ಅನುಗುಣವಾಗಿ ರೈತರು ಬೆಳೆಯುವ ಬೆಳೆಗಳನ್ನು ನಿಗಮದ ಉಗ್ರಾಣಗಳಲ್ಲಿ ಸಂಗ್ರಹಿಸಲಾಗುತ್ತದೆ. ಕಳೆದ ವರ್ಷದಲ್ಲಿ ಒಟ್ಟು 10,497 ಫಲಾನುಭವಿಗಳು ನಿಗಮದ ಉಗ್ರಾಣಗಳ ಪ್ರಯೋಜನ ಪಡೆದಿರುತ್ತಾರೆ. |
| ಈ) | ಕಳೆದ 9 ತಿಂಗಳಿನಲ್ಲಿ ತೆಂಗಿನ ನಾರು ಮಹಾ ಮಂಡಳದ ವತಿಯಿಂದ ಕೈಗೊಂಡ ಕಾರ್ಯಕ್ರಮಗಳು ಯಾವುವು: | ರಾಜ್ಯದಲ್ಲಿ ತೆಂಗಿನ ನಾರಿನ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ 1961 ರಲ್ಲಿ ಕರ್ನಾಟಕ ಸರ್ಕಾರದ ಉದ್ದಿಮೆಯಾಗಿ, ಕರ್ನಾಟಕ ರಾಜ್ಯ ತೆಂಗಿನ ನಾರಿನ ಸಹಕಾರ ಮಹಾಮಂಡಳಿಯು ಸ್ಥಾಪಿತವಾಗಿರುತ್ತದೆ. ರಾಜ್ಯ ಸರ್ಕಾರವು ರೂ.329.22 ಲಕ್ಷಗಳ ಷೇರು ಬಂಡವಾಳ ಹೂಡಿರುತ್ತದೆ. ಮಹಾಮಂಡಳಿಯಲ್ಲಿ 32 ಪ್ರಾಥಮಿಕ ತೆಂಗಿನ ನಾರಿನ ಸಹಕಾರ ಸಂಘಗಳು ಸದಸ್ಯತ್ವವನ್ನು ಪಡೆದಿರುತ್ತವೆ. ಮಹಾಮಂಡಳಿಯು ರಾಜ್ಯ ಮಟ್ಟದ ಸಂಸ್ಥೆಯಾಗಿದ್ದು, ಗ್ರಾಮೀಣ ಪ್ರದೇಶದ ದುರ್ಬಲ ವರ್ಗಕ್ಕೆ ಸೇರಿದ ಮಹಿಳೆಯರನ್ನೊಳಗೊಂಡಂತೆ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಪಲಾನುಭವಿಗಳಿಗೆ ತೆಂಗಿನ ನಾರಿನ ಸಿದ್ಧವಸ್ತುಗಳ |

ತಯಾರಿಕೆಯಲ್ಲಿ ತರಬೇತಿ ನೀಡಿ. ಮಹಾಮಂಡಳಿಯ ಕಾರ್ಯಾಗಾರಗಳಲ್ಲಿ ನಿರಂತರವಾಗಿ ಉದ್ಯೋಗವನ್ನು ಒದಗಿಸುತ್ತಿರುವುದಲ್ಲದೆ ಸಹಕಾರ ಸಂಘಗಳ ಮುಖಾಂತರ ಮತ್ತು ಇತರೆ ಖಾಸಗಿ ಕೈಗಾರಿಕೆಗಳ ಮುಖಾಂತರ ಸುಮಾರು ೫೦೦ ಕುಶಲ ಕರ್ಮಿಗಳಿಗೆ ಉದ್ಯೋಗವನ್ನು ಒದಗಿಸುತ್ತಿರುತ್ತದೆ.

ಈ ಮಹಾಮಂಡಳಿಯು ರಾಜ್ಯಾದ್ಯಾಂತ ೧೨ ಉತ್ಪಾದನಾ ಕೇಂದ್ರಗಳು, ೧೧ ಮಾರಾಟ ಮಳಿಗೆಗಳು ಹಾಗೂ ೦೫ ಸಂಚಾರಿ ಮಾರಾಟ ವಾಹನಗಳನ್ನು ಹೊಂದಿರುತ್ತದೆ. ಸದಸ್ಯ ಸಂಘಗಳಿಗೆ ಬೇಡಿಕೆ ಆಧಾರದ ಮೇಲೆ ಕಚ್ಚಾ ಮಾಲನ್ನು ಒದಗಿಸಿ ಸಂಘಗಳು ತಯಾರಿಸುವ ಉತ್ಪನ್ನಗಳಿಗೆ ಮಾರಾಟ ವ್ಯವಸ್ಥೆಯನ್ನು ಒದಗಿಸುತ್ತಿದೆ.

**ಈ ಮಹಾಮಂಡಳಿಯು ಕಳೆದ 09 ತಿಂಗಳುಗಳಲ್ಲಿ ಕೈಗೊಳ್ಳಲಾದ ಕಾರ್ಯಕ್ರಮಗಳ ವಿವರ ಈ ಕೆಳಕಂಡಂತಿವೆ** :-

1. **ವ್ಯಾಪಾರ ವಹಿವಾಟು** :

ಮಹಾಮಂಡಳಿಯು ಉತ್ತಮ ರೀತಿಯಲ್ಲಿ ತೆಂಗಿನ ನಾರಿನ ಉತ್ಪನ್ನಗಳ ವ್ಯಾಪಾರ ವಹಿವಾಟನ್ನು ನಡೆಸುತ್ತಿದೆ. ೨೦೨೩-೨೪ನೇ ಸಾಲಿನಲ್ಲಿ ಸರ್ಕಾರದ ಅಧಿಸೂಚನೆಯಂತೆ 4(ಜಿ) ಆದೇಶ ಪಡೆದ ನಂತರ ಹೆಚ್ಚಿನ ವ್ಯಾಪಾರ ವಹಿವಾಟಿನಿಂದ ಬಂದ ಲಾಭದಲ್ಲಿ ತೆಂಗಿನ ಸಿಪ್ಪೆಯನ್ನು ಖರೀದಿಸಿ ತೆಂಗಿನ ನಾರಿನ ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳಲಾಗಿದೆ. 4(ಜಿ) ಯೋಜನೆಯಡಿ ಮಹಾಮಂಡಳಿಯು ಉತ್ಪಾದಿಸಿದ ತೆಂಗಿನ ನಾರಿನ ವಸ್ತುಗಳ ಉತ್ಪಾದನೆಯ ಜೊತೆಗೆ ಸದಸ್ಯ ಸಹಕಾರ ಸಂಘಗಳಿಂದ ಸಹ ಉತ್ಪನ್ನಗಳನ್ನು ಖರೀದಿಸಿ ಮಾರಾಟ ಮಾಡುತ್ತಿರುತ್ತದೆ.

ಮಹಾಮಂಡಳಿಯು ಏಪ್ರಿಲ್ 2023 ರಿಂದ ಡಿಸೆಂಬರ್ 2023ರವರೆಗೆ (09 ತಿಂಗಳಲ್ಲಿ) ನಡೆಸಿರುವ ವ್ಯಾಪಾರದ ವಿವರಗಳು ಈ ಕೆಳಗಿನಂತಿರುತ್ತವೆ.

| Sl. No. | Months | Sales Details | Profit | Loss |
|---|---|---|---|---|
| 1 | 2 | 3 | 4 | 5 |
| 1 | Apr-23 | 9487216 | 189744 | |
| 2 | May-23 | 15383218 | 276897 | |
| 3 | Jun-23 | 18177171 | 345366 | |
| 4 | Jul-23 | 7853534 | 149217 | |
| 5 | Aug-23 | 11310573 | 276211 | |
| 6 | Sep-23 | 3252969 | | 422371 |
| 7 | Oct-23 | 6745433 | | 75175 |
| 8 | Nov-23 | 2312286 | | 589550 |
| 9 | Dec-23 | 15470294 | 301670 | |
| TOTAL | | 8,99,92,694.00 | 15,39,105.00 | 10,87,096.00 |
| | | | **NET PROFIT Rs.** | **4,52,009.00** |

2. **ಉತ್ಪಾದನಾ ಚಟುವಟಿಕೆಗಳು** :

ಈ ಮಹಾಮಂಡಳಿಯು ತನ್ನ ಸ್ವಂತ ಉತ್ಪಾದನಾ ಘಟಕಗಳಲ್ಲಿ ತೆಂಗಿನ ನಾರಿನ ಸಿದ್ಧವಸ್ತುಗಳು ಅಂದರೆ ಕಾಯರ್ ಮ್ಯಾಟ್, ಮ್ಯಾಟಿಂಗ್ಸ್, ಕಾಯರ್ ಜಿಯೋ-ಟೆಕ್ಸ್ಟೈಲ್ಸ್, ಕೋ-ಕೋಪೀಟ್ ಮುಂತಾದವುಗಳ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುತ್ತದೆ.

ಈ ಮಹಾಮಂಡಳಿಯು ಏಪ್ರಿಲ್ 2023 ರಿಂದ ಡಿಸೆಂಬರ್ 2023ರವರೆಗೆ (09 ತಿಂಗಳಲ್ಲಿ) ನಡೆಸಿದ ಉತ್ಪಾದನಾ ಚಟುವಟಿಕೆಗಳ ವಿವರಗಳು ಈ ಕೆಳಗನಂತಿರುತ್ತವೆ.

| Sl. No. | Months | Production Value | Wages |
|---|---|---|---|
| 1 | Apr-23 | 1344065 | 219625 |
| 2 | May-23 | 1397774 | 227596 |
| 3 | Jun-23 | 1623300 | 263413 |
| 4 | Jul-23 | 1340989 | 244659 |
| 5 | Aug-23 | 1551895 | 242575 |
| 6 | Sep-23 | 1272294 | 200058 |
| 7 | Oct-23 | 1390493 | 166725 |
| 8 | Nov-23 | 1322954 | 194444 |
| 9 | Dec-23 | 1147651 | 169894 |
| | **TOTAL** | **12391415** | **1928989** |

**3. <u>ಅನುರೂಪ ವೇತನ</u> :**

ಮಹಾಮಂಡಳಿಯ ಉತ್ಪಾದನಾ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ತೆಂಗಿನ ನಾರಿನ ಕುಶಲ ಕರ್ಮಿಗಳಿಗೆ ಅನುರೂಪ ವೇತನ ಸಹಾಯ ಧನ ಬಿಡುಗಡೆ ಮಾಡುತ್ತಿದ್ದು, ಇದಕ್ಕೆ ಸಮನಾದ ವೇತನವನ್ನು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾಗುತ್ತಿದ್ದು. ಸದರಿ ಮೊತ್ತವನ್ನು ತೆಂಗಿನ ನಾರಿನ ಕುಶಲ ಕರ್ಮಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಹಣ ಜಮಾ ಮಾಡಲಾಗುತ್ತಿದೆ. ಈ ಸೌಲಭ್ಯವು ಹೆಚ್ಚಾಗಿ ಗ್ರಾಮೀಣ ಬಡ ಮಹಿಳಾ ಅಭ್ಯರ್ಥಿಗಳಿಗೆ ಲಭಿಸಿರುತ್ತದೆ ಹಾಗೂ ತೆಂಗಿನ ನಾರಿನ ಕುಶಲ ಕರ್ಮಿಗಳ ಆಧಾಯ ಹೆಚ್ಚಾಗಿ ಜೀವನ ಮಟ್ಟ ಸುಧಾರಿಸಿದಂತಾಗುತ್ತದೆ. ಕಳೆದ 09 ತಿಂಗಳಲ್ಲಿ ಮಹಾಮಂಡಳಿಯ ವತಿಯಿಂದ ತೆಂಗಿನ ನಾರಿನ ಕುಶಲ ಕರ್ಮಿಗಳಿಗೆ ರೂ.19,28,989/- ಮಜೂರಿಯನ್ನು ಪಾವತಿಸಲಾಗಿದ್ದು, ಇದಕ್ಕೆ ಸಮನಾದ ರೂ. 19,28,989/-ಮಜೂರಿಯು ರಾಜ್ಯ ಸರ್ಕಾರದಿಂದ ಬಿಡುಗಡೆಗೆ ಬಾಕಿ ಇರುತ್ತದೆ.

**4. <u>ಸ್ಫೂರ್ತಿ ಕಾಯರ್ ಕ್ಲಸ್ಟರ್</u> :**

ಕೇಂದ್ರ ಸರ್ಕಾರದ ಮಹಾತ್ವಾಕಾಂಕ್ಷೆ ಯೋಜನೆಯಾದ ಸ್ಫೂರ್ತಿ ಕಾಯರ್ ಕ್ಲಸ್ಟರ್ ಯೋಜನೆಯನ್ನು ಅನುಷ್ಠಾನ ಮಾಡಲು ಕರ್ನಾಟಕ ರಾಜ್ಯದಲ್ಲಿ ಮಹಾಮಂಡಳಿಯನ್ನು ಅನುಷ್ಠಾನಾಧಿಕಾರಿಯನ್ನಾಗಿ ಕೇಂದ್ರ ತೆಂಗಿನ ನಾರಿನ ಮಂಡಳಿಯವರು ನೇಮಕ ಮಾಡಿರುತ್ತಾರೆ. ಅದರಂತೆ ರಾಜ್ಯ ಸರ್ಕಾರದ ಎಸ್.ಪಿ.ವಿ. ವಂತಿಕೆಯ ಸಹಾಯ ಪಡೆದು ಕುಮಟ ಘಟಕದಲ್ಲಿ ಸುಸಜ್ಜಿತವಾದ ಭೂವಸ್ತ್ರ ತಯಾರಿಕಾ ಘಟಕವನ್ನು ಸ್ಥಾಪಿಸಿ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುತ್ತದೆ.

ಇದೇ ರೀತಿ ತುಮಕೂರು ಹೆರಿಟೇಜ್ ಕ್ಲಸ್ಟರ್‌ನ ಉಪ ಕ್ಲಸ್ಟರ್‌ಗಳಾದ ನಿಟ್ಟೂರು, ತ್ಯಾಗಟೂರು ಮತ್ತು ತಿಪಟೂರು ಕಾಯರ್ ಕ್ಲಸ್ಟರ್‌ಗಳನ್ನು ಮಹಾಮಂಡಳಿಯು ತೆಂಗಿನ ನಾರಿನ ಸಂಕೀರ್ಣ ಘಟಕ, ಹೇರೂರು, ಗುಬ್ಬಿ ಘಟಕದಲ್ಲಿ ಸ್ಥಾಪಿಸಲು ರಾಜ್ಯ ಸರ್ಕಾರದಿಂದ ಎಸ್.ಪಿ.ವಿ ವಂತಿಕೆಯ ಅನುದಾನದಿಂದ ತೆಂಗಿನ ನಾರಿನ ಭೂವಸ್ತ್ರ ಹಾಗೂ ಪಿತ್ ಮೆನ್ಯೂರ್ ಗೊಬ್ಬರ ತಯಾರಿಕಾ ಘಟಕವನ್ನು ಸ್ಥಾಪಿಸಲು ಕ್ರಮವಹಿಸಲಾಗಿದೆ.

ಇದರ ಜೊತೆಗೆ ಮಹಾಮಂಡಳಿಯ ವತಿಯಿಂದ ಖಾಸಗಿ/ಸಂಸ್ಥೆಗಳ ಕ್ಲಸ್ಟರ್‌ಗಳಾದ ಹರಳಕಟ್ಟ,ಅಡಲಗೆರೆ ಮತ್ತು ಜಾವಗಲ್ ಸ್ಫೂರ್ತಿ ಕಾಯರ್ ಕ್ಲಸ್ಟರ್‌ಗಳನ್ನು ಯಶಸ್ವಿಯಾಗಿ ಹಾಗೂ ಸಮರ್ಪಕವಾಗಿ ಅನುಷ್ಠಾನಗೊಳಿಸಲಾಗಿದ್ದು, ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳಲು ಕ್ರಮವಹಿಸಲಾಗಿದೆ. ಮೇಲ್ಕಂಡ ಕ್ಲಸ್ಟರ್‌ಗಳಿಂದ ಉತ್ಪಾದನೆಯಾದ ತೆಂಗಿನ ನಾರಿನ ಭೂವಸ್ತ್ರವನ್ನು ಹಟ್ಟಿ ಚಿನ್ನದ ಗಣಿ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಇತರೆ ಇಲಾಖೆಗಳಿಗೆ ಸರಬರಾಜು ಮಾಡಲು ಮಹಾಮಂಡಳದ ವತಿಯಿಂದ ಕ್ರಮವಹಿಸಲಾಗುತ್ತದೆ.

**5. <u>ತೆಂಗಿನ ನಾರಿನ ಭೂವಸ್ತ್ರ :</u>**

ಮಹಾಮಂಡಳಿಯಲ್ಲಿ ಉತ್ಪಾದಿಸುತ್ತಿರುವ ತೆಂಗಿನ ನಾರಿನ ಭೂವಸ್ತ್ರವನ್ನು ಕೆ.ಆರ್.ಆರ್.ಡಿ.ಸಿ.ಎಲ್ ಪಂಚಾಯತ್‌ರಾಜ್ ಗ್ರಾಮೀಣ ಅಭಿವೃದ್ಧಿ ಇಲಾಖೆಗಳು "ನಮ್ಮ ಗ್ರಾಮ ನಮ್ಮ ರಸ್ತೆ" ಯೋಜನೆಯಡಿ ಗ್ರಾಮೀಣ ಭಾಗದಲ್ಲಿ ಗ್ರಾಮೀಣ ಭಾಗದ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸಲು ಮಂಜೂರಾತಿ ನೀಡಿದ್ದು ತಹಲ್‌ವರೆವಿಗೂ ಸರ್ಕಾರದಿಂದ ಯಾವುದೇ ಆದೇಶ ಬಂದಿರುವುದಿಲ್ಲ.

ಇದೇ ರೀತಿ ಹಟ್ಟಿ ಚಿನ್ನದ ಗಣಿ ಉತ್ಪಾದನಾ ಕೇಂದ್ರದಲ್ಲಿ ತೆಂಗಿನ ನಾರಿನ ಭೂವಸ್ತ್ರವನ್ನು ಉಪಯೋಗಿಸಿ ಹಸಿರಿಕರಣಗೊಳಿಸಲು ಆದೇಶವಿದ್ದರೂ ಮಹಾಮಂಡಳಿಗೆ ಇದುವರೆವಿಗೂ ಸರ್ಕಾರದಿಂದ ತೆಂಗಿನ ನಾರಿನ ಭೂವಸ್ತ್ರದ ಸರಬರಾಜು ಆದೇಶ ಬಂದಿರುವುದಿಲ್ಲ.

**6. <u>ಶ್ರೀ ಗುತ್ತಲಗೌಡ ತೆಂಗಿನ ನಾರಿನ ಭವನ :-</u>**

ಮಹಾಮಂಡಳಿಯ ಕೇಂದ್ರ ಕಛೇರಿಯು ಇದುವರೆವಿಗೂ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸರ್ ಎಂ.ವಿಶ್ವೇಶ್ವರಯ್ಯ ಲೇಔಟ್. ೫ನೇ ಬ್ಲಾಕ್ ಬೆಂಗಳೂರು ಇಲ್ಲಿ 676.81 ಚದರ ಮೀಟರ್ ಅಂದರೆ 7276 ಚದರ ಅಡಿ ಅಳತೆಯ ಸಿ.ಎ. ಸಂಖ್ಯೆ ೩/ಬಿ ನಿವೇಶನವನ್ನು ಹಂಚಿಕೆ ಮಾಡಿ ಮಹಾಮಂಡಳಿಯ ಹೆಸರಿಗೆ ನೋಂದಣಿ ಮತ್ತು ಖಾತೆ ಮಾಡಿಸಲಾಗಿದೆ. ಸದರಿ ಜಾಗದಲ್ಲಿ ಶ್ರೀ ಗುತ್ತಲಗೌಡ ಕಾಯರ್ ಭವನ ನಿರ್ಮಿಸಲು ಕಟ್ಟಡದ ನಕ್ಷೆಯನ್ನು ಬಿ.ಡಿ.ಎ ಕಛೇರಿಯ ಆದೇಶ ಸಂಖ್ಯೆ ಬೆಂ.ಅ.ಪ್ರಾ/ನಮ/ಅ.ಸ/ ಅ.ಅ-1/ಪ/05/2022-23, ದಿನಾಂಕ:15.11.2022 ರನ್ವಯ ಅನುಮೋದನೆ ನೀಡಿರುತ್ತಾರೆ. ಇದಲ್ಲದೆ ಬೆಸ್ಕಾಂ ನಿಂದ ಮತ್ತು ಬೆಂಗಳೂರು ನೀರು ಸರಬರಾಜು ಮತ್ತು ಜಲ ಮಂಡಳಿಯಿಂದ NOC ಯನ್ನು ಸಹ ಪಡೆಯಲಾಗಿರುತ್ತದೆ.

ಶ್ರೀ ಗುತ್ತಲಗೌಡ ಕಾಯರ್ ಭವನ"ದ ಸಿವಿಲ್ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ಸರ್ಕಾರಿ ಸಂಸ್ಥೆಯಿಂದ ಮಾಡಿಸಲು ಸರ್ಕಾರದ ಕಾರ್ಯದರ್ಶಿರವರು (ಎಂ.ಎಸ್.ಎಂ.ಇ ಮತ್ತು ಗಣಿ), ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ರವರು ಹಾಗೂ ಸಹಕಾರ ಸಂಘಗಳ ನಿಬಂಧಕರು, ಸಹಕಾರ ಇಲಾಖೆ ರವರುಗಳ ಸಹ ಅನುಮೋದನೆ ನೀಡಿರುತ್ತಾರೆ. ಅದರಂತೆ ಮೊದಲನೇ ಹಂತದಲ್ಲಿ 2017-18ನೇ ಸಾಲಿನಲ್ಲಿ ಅರ್ಬನ್ ಹಾಥ್ ಅನುದಾನ ರೂ.66.00 ಲಕ್ಷಗಳಾಗಿದ್ದು, ಇದರ ಜೊತೆಗೆ ಮಹಾಮಂಡಳಿಗೆ ಬಿಡುಗಡೆಯಾಗಿರುವ ಕೇಂದ್ರ ಹಾಗೂ ರಾಜ್ಯದ ಪಾಲಿನ ಮಾರುಕಟ್ಟೆ ಅಭಿವೃದ್ಧಿ ಸಹಾಯ ಧನದ ಅನುದಾನ ರೂ.130.00 ಲಕ್ಷಗಳನ್ನು ಬಳಸಿಕೊಂಡು ಅರ್ಬನ್‌ಹಾಥ್ ಹಾಗೂ ಮಾರುಕಟ್ಟೆ ಅಭಿವೃದ್ಧಿ ಸಹಾಯಧನ ಯೋಜನೆಯಡಿಯಲ್ಲಿನ ಒಟ್ಟು ರೂ.1.96 ಕೋಟಿ ವೆಚ್ಚದಲ್ಲಿ "ಶ್ರೀ ಗುತ್ತಲಗೌಡ ಕಾಯರ್ ಭವನದ" ಕಾಮಗಾರಿಯನ್ನು ನಿರ್ಮಿಸಲಾಗುತ್ತಿದೆ. ಸದರಿ ಕಾಮಗಾರಿಯ ಕೆಲಸವು ಪ್ರಗತಿಯಲ್ಲಿದ್ದು ಪ್ರಸ್ತುತ್ತ ಕಟ್ಟಡ ನಿರ್ಮಾಣದ ಕೆಲಸವು ನೆಲಮಹಡಿಯ ಆರ್.ಸಿ.ಸಿ ರೂಫಿಂಗ್‌ನ ಮಟ್ಟಕ್ಕೆ ತಲುಪಿದ್ದು, ಮೇಲ್ಛಾವಣಿಯ ಕೆಲಸವನ್ನು ಪೂರ್ಣಗೊಳಿಸುವ ಹಂತಕ್ಕೆ ತಲುಪಿರುತ್ತದೆ.

(ರೂ.ಲಕ್ಷಗಳಲ್ಲಿ)

| ಯೋಜನೆಯ ವಿವರ | 2019-20 | 2020-21 | 2021-22 |
|---|---|---|---|
| ತೆಂಗಿನ ನಾರಿನ ವಲಯಕ್ಕೆ ನೆರವು ಅನುರೂಪ ವೇತನ | 37.42 | 24.21 | 13.08 (ಜನವರಿ 22ರವರೆಗೆ) |
| ಎಂ.ಡಿ.ಎ | 87.69 | 80.85 ರಾಜ್ಯದ ಪಾಲು | 163.325 ರಾಜ್ಯದ ಪಾಲು |
| ಆಡಳಿತಾತ್ಮಕ ವೆಚ್ಚ | 40.00 | 64.37 | 60.00 |
| ವಿಶೇಷ ಘಟಕ ಯೋಜನೆ ತರಬೇತಿ ಕಾರ್ಯಕ್ರಮ | 59.40 | Nil | Nil |
| ಗಿರಿಜನ ಉಪಯೋಜನೆ | 19.80 | Nil | Nil |

**ಸಂಖ್ಯೆ: ಸಿಒ 25 ಸಿಎಲ್‌ಎಸ್ 2024**

K. N. Rajanna

**(ಕೆ.ಎನ್.ರಾಜಣ್ಣ)**

ಸಹಕಾರ ಸಚಿವರು

(ಅನುಬಂಧ -I)

| ಕಳೆದ ಒಂದು ವರ್ಷಗಳಲ್ಲಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮದಲ್ಲಿ ಸಂಗ್ರಹಿಸಲಾದ ಕೃಷಿ ಉತ್ಪನ್ನಗಳ ವಿವರ | | | |
|---|---|---|---|
| ಕ್ರ.ಸಂ | ಕೃಷಿ ಉತ್ಪನ್ನ | ಪ್ರಮಾಣ (ಕ್ವಿಂಟಾಲ್‌ಗಳಲ್ಲಿ) | ಪ್ರಮಾಣ (ಚೀಲಗಳಲ್ಲಿ) |
| 1 | ಉದ್ದಿನಕಾಳು | 10087.8 | 17455 |
| 2 | ಹೆಸರುಕಾಳು | 14317.17 | 26886 |
| 3 | ಹುರಳಿಕಾಳು | 6962.37 | 14330 |
| 4 | ಬಟಾಣಿ | 2844.9 | 9483 |
| 5 | ಅವರೆ | 49170.41 | 64892 |
| 6 | ಬಜೆ | 1270.4 | 3176 |
| 7 | ಸಜ್ಜೆ | 8384.75 | 16721 |
| 8 | ಉದಲು | 188 | 458 |
| 9 | ಕಡಲೆ | 2098801.2 | 4171154 |
| 10 | ಅಕ್ಕಿ | 27432.5 | 55276 |
| 11 | ಕೊರಲೆ | 36.7 | 78 |
| 12 | ಗೋಡಂಬಿ | 1145.32 | 1676 |
| 13 | ಮಣಸಿಕಾಯಿ | 957.36 | 3564 |
| 14 | ಕಾಫಿ ಬೀಜ | 170 | 340 |
| 15 | ಕೊಬ್ಬರಿ | 1168897.2 | 2922852 |
| 16 | ಧನಿಯ | 40.05 | 89 |
| 17 | ಹತ್ತಿಬೀಜ | 642 | 1605 |
| 18 | ಅಳಸಂದೆ | 1906.7 | 3813 |
| 19 | ಡಯಾಂಚ | 2097.5 | 4195 |
| 20 | ಶುಂಠಿ | 2272.46 | 4597 |
| 21 | ಶೇಂಗಾ | 10409.8 | 26541 |
| 22 | ಹವೀಜ ಬೀಜ | 122.4 | 302 |
| 23 | ಬಿಳಿಜೋಳ | 3603867.93 | 7205321 |
| 24 | ರವೆಗೋಧಿ | 6753.6 | 10313 |
| 25 | ಆರ್ಕ(ಹಾರಕ) | 230 | 460 |
| 26 | ಸಾಮೆ | 1447.85 | 2907 |
| 27 | ಜೋಳ | 282535.36 | 515701 |
| 28 | ನವಣೆ | 268.5 | 537 |
| 29 | ಬೇವು | 124 | 535 |
| 30 | ಭತ್ತ | 1483391.58 | 2833489 |
| 31 | ಜೋಳ | 1473.8 | 2312 |
| 32 | ರಾಗಿ | 298318433 | 59664204 |
| 33 | ಅಕ್ಕಿ | 147360.18 | 382168 |
| 34 | ಕುಸುಬೆ | 16697.92 | 35548 |
| 35 | ಎಳ್ಳು | 193.6 | 242 |
| 36 | ಸೋಯಾಬಿನ್ಸ್ | 104874.4 | 174242 |
| 37 | ಬೆಲ್ಲ | 64542.2 | 129090 |
| 38 | ಸೂರ್ಯಕಾಂತಿ ಬೀಜ | 95833.07 | 171394 |
| 39 | ಸೆಣಬು | 4619.6 | 8411 |
| 40 | ಹುಣಸೇಬೀಜ | 2763.7 | 4872 |
| 41 | ತೊಗರಿ | 224529.09 | 329973 |
| 42 | ಅರಿಶಿಣ | 35031.39 | 58549 |
| 43 | ತೆಂಗಿನಕಾಯಿ | 255 | 25500 |
| 44 | ಗೋಧಿ | 11213.06 | 20913 |
| ಒಟ್ಟು | | 307814595.8 | 78926164 |